# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

## ಅಧಿಸೂಚನೆ

## ಸಂಖ್ಯೆ ಬಿ/15/12 ಬೆಂಗಳೂರು, ದಿನಾಂಕ 21ನೇ ಮಾರ್ಚ್ 2013

## ಕ.ವಿ.ನಿ.ಆ. (ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳು) ವಿನಿಯಮಗಳು, 2013

ಪ್ರಸ್ತಾವನೆ :

ಆಯೋಗವು ದಿನಾಂಕ 30ನೇ ಏಪ್ರಿಲ್ 2012ರ ತನ್ನ ವಿದ್ಯುತ್ ದರ ಆದೇಶದಲ್ಲಿ ಗ್ರಾಹಕರಿಂದ ಇಂಧನ ಬೆಲೆ ಹೊಂದಾಣಿಕೆಯ ಸಂಗ್ರಹಣೆಗಾಗಿ ಒಂದು ಯಾಂತ್ರಿಕ ಕೌಶಲ ವ್ಯವಸ್ಥೆಯನ್ನು (Mechanism) ಕಾರ್ಯ ರೂಪಕ್ಕೆ ತರಬೇಕೆಂದು ನಿರ್ಧರಿಸಿ ಮತ್ತು 5ನೇ ಅಕ್ಟೋಬರ್ 2012 ರಂದು ಕರಡು ವಿನಿಯಮಗಳನ್ನು ಅಧಿಸೂಚಿಸಿ ಹಾಗೂ ಆಗಿಂದಾಗ್ಗೆ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳನ್ನು ನಿರ್ಧರಿಸುವುದಕ್ಕಾಗಿ ಅನುಸರಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಅಭಿಪ್ರಾಯ, ಸಲಹೆ, ಆಕ್ಷೇಪಣೆಗಳನ್ನು ಯಾವುದಾದರೂ ಇದ್ದರೆ, ಆಹ್ವಾನಿಸಿತ್ತು. ಅಲ್ಲದೆ ಆಯೋಗವು 14ನೇ ಡಿಸೆಂಬರ್ 2012ರಂದು ಸದರಿ ವಿಷಯದ ಬಗ್ಗೆ ಅಭಿಪ್ರಾಯಗಳನ್ನು ಪಡೆಯಲು ಆಯೋಗದ ಸಭಾಂಗಣದಲ್ಲಿ ಒಂದು ಸಾರ್ವಜನಿಕ ಆಲಿಕೆಯನ್ನು ನಡೆಸಿತ್ತು. ಸಾರ್ವಜನಿಕರಿಂದ ಸ್ವೀಕರಿಸಿದ ಅಭಿಪ್ರಾಯ, ಸಲಹೆ ಮತ್ತು ಆಕ್ಷೇಪಣೆಗಳನ್ನು ಮತ್ತು ಈ ಸಂಬಂಧವಾಗಿ ಸಾರ್ವಜನಿಕ ಆಲಿಕೆಯಲ್ಲಿ ಸಲ್ಲಿಸಲಾದ ಹೇಳಿಕೆಗಳನ್ನು ಸಹಾ ಪರಿಗಣಿಸಿದೆ.

ಆದ್ದರಿಂದ, ಆಯೋಗವು ವಿದ್ಯುಚ್ಛಕ್ತಿ ಅಧಿನಿಯಮ, 2003ರ ನಿಯಮ 181 ಮತ್ತು 62(4)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಪ್ರಯೋಗಿಸಿ ಇಂಧನ ಬೆಲೆ ಹೊಂದಾಣಿಕೆ ವೆಚ್ಚಗಳನ್ನು ಸಂಗ್ರಹಿಸಲು ವಿನಿಯಮಗಳನ್ನು ಈ ಮೂಲಕ ಅಧಿಸೂಚಿಸಿದೆ.

ಇ. **"ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳು"** ಎಂದರೆ ತ್ರೈಮಾಸಿಕ ಬಿಲ್ಲಿಂಗ್ ಈ ಹಿಂದಿನ ಎರಡನೇ ತ್ರೈಮಾಸಿಕದ ಇಂಧನ ಬೆಲೆಯಲ್ಲಿ ಆದ ವ್ಯತ್ಯಾಸದ ಆಧಾರದ ಮೇಲೆ ತ್ರೈಮಾಸಿಕ ಬಿಲ್ಲಿಂಗ್‌ನಲ್ಲಿ ವಸೂಲಿ ಮಾಡಲು ಈ ವಿನಿಯಮಗಳಲ್ಲಿ ನಿರ್ಧರಿಸಿದ ಶುಲ್ಕಗಳು.

(ii) ಈ ವಿನಿಯಮಗಳಲ್ಲಿ ಬರುವ ಮತ್ತು ಇದರಲ್ಲಿ ಮೇಲೆ ವಿವರಿಸದಿರುವ ಪದಗಳು ಅಥವಾ ಪದಾವಳಿಗಳು ಈ ಅಧಿನಿಯಮದಲ್ಲಿ ಅಥವಾ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮದಲ್ಲಿರುವ ಅದೇ ಅರ್ಥವನ್ನೇ ಹೊಂದಿರತಕ್ಕದ್ದು ಮತ್ತು ಯಾವುದೇ ಅಸಂಗತತೆ ಕಂಡು ಬಂದ ಸಂದರ್ಭದಲ್ಲಿ, ಅಧಿನಿಯಮದಲ್ಲಿರುವ ಉಪಬಂಧಗಳೇ ಚಾಲ್ತಿಯಲ್ಲಿರತಕ್ಕದ್ದು.

## 3. ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳ ಸಂಗ್ರಹಣೆ:

3.1 ಪ್ರತಿಯೊಬ್ಬ ವಿತರಣಾ ಲೈಸೆನ್ಸುದಾರನು ಗ್ರಾಹಕರು ಸಂದಾಯ ಮಾಡಬೇಕಾದ ವಿದ್ಯುತ್ ದರದ ಭಾಗವಾಗಿ ಈ ವಿನಿಯಮಗಳಲ್ಲಿನ ಉಪಬಂಧಗಳ ಅನುಸಾರವಾಗಿ ತ್ರೈಮಾಸಿಕ ಬಿಲ್ಲಿಂಗ್ ಅವಧಿಯಲ್ಲಿ ತನ್ನ ಗ್ರಾಹಕರಿಂದ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳನ್ನು ಸಂಗ್ರಹಿಸತಕ್ಕದ್ದು.

ವಿವರಣೆ : ಮೊದಲ ತ್ರೈಮಾಸಿಕ ಬಿಲ್ಲಿಂಗ್ ಪದ್ಧತಿಯು 1ನೇ ಜುಲೈ 2013 ರಿಂದ ಪ್ರಾರಂಭವಾಗತಕ್ಕದ್ದು.

ಪರಂತು, ಯಾವುದೇ ತ್ರೈಮಾಸಿಕ ಬಿಲ್ಲಿಂಗ್‌ನಲ್ಲಿ ಪ್ರತಿ ಯೂನಿಟ್ ಅಥವಾ ಸಂಬಂಧಪಟ್ಟ ವರ್ಷಕ್ಕೆ ಅನ್ವಯವಾಗಬಹುದಾದ ವಿದ್ಯುತ್ ದರದಲ್ಲಿ ಆಯೋಗವು ನಿಗದಿ ಪಡಿಸಿದ ಯಾವುದೇ ಇತರೆ ಮಿತಿಗಿಂತ ಹತ್ತು ಪೈಸೆ ಮೀರಿದರೆ, ವಿತರಣಾ ಲೈಸೆನ್ಸುದಾರನು ಆಯೋಗದ

4.3 ಈ ವಿನಿಯಮಗಳಲ್ಲಿ ಉಪಬಂದಿಸಿದಂತೆ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳ ಲೆಕ್ಕವು ಪ್ರತಿಯೊಂದು ತ್ರೈಮಾಸಿಕ ಬಿಲ್ಲಿಂಗ್‌ನ ಪ್ರಾರಂಭಕ್ಕೆ ಮುಂಚೆ 45 ದಿನಗಳೊಳಗಾಗಿ ವಿತರಣಾ ಲೈಸೆನ್ಸುದಾರನಿಂದ ಸಾಮಾನ್ಯವಾಗಿ ಪೂರ್ಣವಾಗತಕ್ಕದ್ದು.

5. **ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳನ್ನು ಲೆಕ್ಕ ಹಾಕುವುದಕ್ಕೆ ಸೂತ್ರ:**

5.1 ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳನ್ನು ಲೆಕ್ಕ ಹಾಕುವ ಸೂತ್ರವು ಈ ಕೆಳಕಂಡಂತಿರತಕ್ಕದ್ದು;

$$FAC = [(VC_{SG} + VC_{CGS} + VC_{IPP} + Z)/ Q]*1000$$

ಅಂದರೆ,

**$VC_{SG}$** = ರಾಜ್ಯ ಸ್ವಾಮ್ಯದ ವಿದ್ಯುತ್ ಉತ್ಪಾದನಾ ಕೇಂದ್ರಗಳಲ್ಲಿ ವ್ಯತ್ಯಸ್ತವಾಗಬಹುದಾದ ಬೆಲೆಯಲ್ಲಿನ ಬದಲಾವಣೆ;

**$VC_{CGS}$** = ಕೇಂದ್ರೀಯ ಉತ್ಪಾದನಾ ಕೇಂದ್ರಗಳಲ್ಲಿ ವ್ಯತ್ಯಸ್ತವಾಗಬಹುದಾದ ಬೆಲೆಯಲ್ಲಿನ ಬದಲಾವಣೆ;

**$VC_{IPP}$** = ವಿತರಣ ಲೈಸೆನ್ಸುದಾರರೊಂದಿಗೆ ದೀರ್ಘಾವಧಿ ವಿದ್ಯುತ್ ಖರೀದಿ ಕರಾರು(PPAs) ಹೊಂದಿರುವ ಇತರೆ ಸ್ವತಂತ್ರ ವಿದ್ಯುತ್ ಉತ್ಪಾದಕರ ಉತ್ಪಾದನಾ ಕೇಂದ್ರಗಳಲ್ಲಿ ವ್ಯತ್ಯಸ್ತವಾಗಬಹುದಾದ ಬೆಲೆಯಲ್ಲಿನ ಬದಲಾವಣೆ;

**Q** = ಐಪಿ ಸೆಟ್ಸ್ (ನೀರಾವರಿ ಪಂಪು ಸೆಟ್‌ಗಳು) ಮತ್ತು ಬಿಜೆ/ಕೆಜೆ ಪ್ರವರ್ಗದ ಮೀಟರ್‌ಗಳಿಂದ ಮಾರಾಟ ಮತ್ತು ನಿರ್ಧರಿಸಲಾದ ಮಾರಾಟ ಇವು ಸೇರಿದ ವಾಸ್ತವ ಮಾರಾಟ.

**Z** = ಯಾವುದೇ ಹೆಚ್ಚು /ಕಡಿಮೆ ವಸೂಲು ಮಾಡುವ ಹೊಂದಾಣಿಕೆ ಅಪವರ್ತನ.

iii) ಯಾವುದೇ ತ್ರೈಮಾಸಿಕ ಬಿಲ್ಲಿಂಗ್‌ಗಾಗಿ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳನ್ನು ತರುವಾಯ ಸೇರಿಸ ಬೇಕೆಂದು ವಿತರಣಾ ಲೈಸೆನ್ಸುದಾರರು ಗಮನಿಸಲಾಗುವ ವ್ಯತ್ಯಾಸ್ತವಾಗುವ ಬೆಲೆಗಳಲ್ಲಿ ಆಗುವ ಯಾವುದೇ ವ್ಯತ್ಯಾಸಗಳು.

ಇದನ್ನು ಈ ವಿನಿಯಮಗಳಿಗೆ ಅನುಬಂಧಿಸಿದ ನಮೂನೆ–2ರ ಪ್ರಕಾರ ಲೆಕ್ಕಹಾಕತಕ್ಕದ್ದು.

6. ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳನ್ನು ಲೆಕ್ಕಹಾಕುವುದು ಮತ್ತು ಬಿಲ್ ಮಾಡುವುದು:

6.1 ವಿತರಣಾ ಲೈಸೆನ್ಸುದಾರನು ಗ್ರಾಹಕರ ಬಿಲ್ಲುಗಳಲ್ಲಿ ಪ್ರತ್ಯೇಕವಾಗಿ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳ ದರ ಮತ್ತು ಮೊಬಲಗನ್ನು ಸೂಚಿಸಬೇಕು ಮತ್ತು ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಪ್ರತ್ಯೇಕ ಪ್ರಧಾನ ಲೆಕ್ಕಪತ್ರ ಶೀರ್ಷಿಕೆಯ ಅಡಿಯಲ್ಲಿ ಸಂಗ್ರಹ ಮಾಡಿದ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳ ಮೊಬಲಗನ್ನು ದಾಖಲಿಸತಕ್ಕದ್ದು.

6.2 ಈ ವಿನಿಯಮಗಳಲ್ಲಿ ಒದಗಿಸಲಾದ ಸೂತ್ರದ ಪ್ರಕಾರ ನಿರ್ಧರಿಸಲಾದ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳನ್ನು ಹತ್ತಿರದ ಪೂರ್ಣಾಂಕಕ್ಕೆ ತಂದು ಪ್ರತಿ ಯೂನಿಟ್ ಪೈಸೆಯಲ್ಲಿ ಇರತಕ್ಕದ್ದು.

6.3 ಪ್ರತಿಯೊಂದು ತ್ರೈಮಾಸಿಕಕ್ಕೆ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳ ಅನುಮೋದನೆಗಾಗಿ ಆಯೋಗಕ್ಕೆ ಒದಗಿಸಬೇಕಾಗಿರುವ ಎಲ್ಲಾ ದಸ್ತಾವೇಜುಗಳಿಗೆ ವಿತರಣ ಲೈಸೆನ್ಸುದಾರನ ಅಧಿಕೃತ ಪ್ರತಿನಿಧಿಯು ಯುಕ್ತವಾಗಿ ಸಹಿಮಾಡಿರಬೇಕು ಮತ್ತು ಅವುಗಳನ್ನು ಚಾರ್ಟರ್ಡ್ ಅಕೌಂಟೆಂಟ್‌ರು ಕ್ರಮಬದ್ಧವಾಗಿ ಪ್ರಮಾಣೀಕರಿಸತಕ್ಕದ್ದು.

9. ತಿದ್ದುಪಡಿ ಮಾಡಲು ಅಧಿಕಾರ :

ಆಯೋಗವು ಕಾಲಕಾಲಕ್ಕೆ ಈ ವಿನಿಯಮಗಳ ಯಾವುದೇ ಉಪಬಂಧಗಳನ್ನು ಸೇರಿಸಬಹುದು, ವ್ಯತ್ಯಸ್ತ, ಬದಲಾವಣೆ, ಮಾರ್ಪಾಟು ಅಥವಾ ತಿದ್ದುಪಡಿ ಮಾಡಬಹುದು.

ಆಯೋಗದಿಂದ ಅನುಮೋದನೆಗೊಂಡಿದೆ

ಎನ್. ಶ್ರೀರಾಮನ್
ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| ಠಟಾ | | | | | | | | | | | | | | | |
| ಶಯಲ್ ಸೀಮಾ | | | | | | | | | | | | | | | |
| ಯು.ಪಿ.ಸಿ.ಎಲ್. (ತಾತ್ಕಾಲಿಕ) | | | | | | | | | | | | | | | |
| ಟ್ಟು ___ ವಿ.ಸಿ.ಐ.ಪಿ.ಪಿ. | | | | | | | | | | | | | | | |
| ಟ್ಟು ಜುಮ್ಲಾ = ವಿ.ಸಿ.ಎಸ್.ಜಿ. + .ಸಿ.ಸಿ.ಜಿ.ಎಸ್. + ವಿ.ಸಿ.ಐ.ಪಿ.ಪಿ. | | | | | | | | | | | | | | | |

ಉತ್ಪಾದನಾ ಕೇಂದ್ರಗಳು / ಉತ್ಪಾದನಾ ಮೂಲಗಳನ್ನು ಸೂಚಿಸಲಾಗಿದೆ. ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳ ನಿಯಮಾವಳಿಗಳ ಪ್ರಕಾರ ಸೇರಿಸಬೇಕಾದಂತಹ ಯಾವುದೇ ಇತರೆ ಅಂಥ ಕೇಂದ್ರಗಳನ್ನು ಸೇರಿಸತಕ್ಕದ್ದು

ಆಯೋಗದ ಸಂಬಂಧಪಟ್ಟ ವಿದ್ಯುತ್ ದರ ಆದೇಶಗಳಲ್ಲಿ ಅನುಮೋದಿತವಾದಂತೆ ವ್ಯತ್ಯಸ್ತ ಶುಲ್ಕಗಳು.

ಸೂಚನೆ : ನಮೂನೆಯು ಎಸ್ಕಾಂಗಳ ಅಧಿಕೃತ ಪ್ರತಿನಿಧಿಗಳಿಂದ ಸಹಿ ಮಾಡಲ್ಪಟ್ಟಿರಬೇಕು ಹಾಗೂ ಅದನ್ನು ಚಾರ್ಟರ್ಡ್ ಅಕೌಂಟೆಂಟರು ಯುಕ್ತವಾಗಿ ಪ್ರಮಾಣೀಕರಿಸಿರಬೇಕು.

## ಕ.ವಿ.ನಿ.ಆ. (ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳು) ವಿನಿಯಮಗಳು 2013ಕ್ಕೆ ಅನುಬಂಧ

| ಹೊಂದಾಣಿಕೆ ಅಪವರ್ತನದ ಲೆಕ್ಕ (ಜೆಡ್) | | ನಮೂನೆ-2 |
|---|---|---|
| ಕ್ರಮ ಸಂಖ್ಯೆ | ವಿವರಗಳು | ರೂ. ಕೋಟಿಗಳಲ್ಲಿ |
| ಎ | ------ಗಾಗಿ------ಆರ್ಥಿಕ ವರ್ಷದ ತ್ರೈಮಾಸಿಕಕ್ಕಾಗಿ ಎಸ್ಕಾಂನಿಂದ ಪ್ರಸ್ತಾವಿಸಿದ್ದ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳು | ಎ |
| ಬಿ | ------ಗಾಗಿ------ಆರ್ಥಿಕ ವರ್ಷದ ತ್ರೈಮಾಸಿಕಕ್ಕಾಗಿ ಆಯೋಗದಿಂದ ಅನುಮೋದಿಸಿದ್ದ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳು | ಬಿ |
| ಸಿ | ಸಂಬಂಧಪಟ್ಟ ತ್ರೈಮಾಸಿಕ ಬಿಲ್ಲಿಂಗ್‌ನಲ್ಲಿ ಎಸ್ಕಾಂನಿಂದ ವಾಸ್ತವವಾಗಿ ಸಂಗ್ರಹಿಸಲಾದ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳು<br>(ಮಾಸಿಕ ಡಿಸಿಬಿ ಅಂಕಿಅಂಶಗಳ ಪ್ರಕಾರ) | ಸಿ |
| ಡಿ | ---------ರಲ್ಲಿ--------ಆರ್ಥಿಕ ವರ್ಷದ ತ್ರೈಮಾಸಿಕದಲ್ಲಿ ಹೊಂದಿಸಬೇಕಾದ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳಲ್ಲಿ ಆದ ಹೆಚ್ಚಳ/ಇಳಿಕೆ | ಡಿ=(ಸಿ–ಬಿ) |
| ಇ | 'ಎ' ನಲ್ಲಿ ನಿರ್ದಿಷ್ಟ ಪಡಿಸಿದ ತ್ರೈಮಾಸಿಕಕ್ಕಾಗಿ ಸಲ್ಲಿಕೆಯಾದ ನಂತರ ಈಗ* ಗಮನಿಸಲಾದ ಯಾವುದೇ ಇಂಧನ ಬೆಲೆಯ ವ್ಯತ್ಯಾಸಗಳು | ಇ |
| ಎಫ್ | ಹಿಂದಿನ ತ್ರೈಮಾಸಿಕ ಬಿಲ್ಲಿಂಗ್‌ಗಾಗಿ ಇಂಧನ ಬೆಲೆ ಹೊಂದಾಣಿಕೆ ಶುಲ್ಕಗಳ ಬಗ್ಗೆ ಆಯೋಗವು ಅನುಮೋದನೆ ನೀಡುವಾಗ ಗಮನಿಸಿದ ಯಾವುದೇ ಇತರೆ ವ್ಯತ್ಯಸ್ತಗಳು | ಎಫ್ |
| | ಹೊಂದಾಣಿಕೆ ಅಪವರ್ತನ (ಜೆಡ್) | ಜೆಡ್=(ಡಿ+ಇ+ಎಫ್) |

* ಅವಶ್ಯವಿರುವ ದಸ್ತಾವೇಜುಗಳೊಂದಿಗೆ ಒಂದು ಪ್ರತ್ಯೇಕ ಅಂಕಿಅಂಶಗಳ ಮೂಲಕ ವಿವರಗಳನ್ನು ಒದಗಿಸಬೇಕು.

ಸೂಚನೆ: ನಮೂನೆಯು ಎಸ್ಕಾಂಗಳ ಅಧಿಕೃತ ಪ್ರತಿನಿಧಿಗಳಿಂದ ಸಹಿ ಮಾಡಲ್ಪಟ್ಟಿರಬೇಕು ಹಾಗೂ ಅದನ್ನು ಚಾರ್ಟರ್ಡ್ ಅಕೌಂಟೆಂಟರು ಯುಕ್ತವಾಗಿ ಪ್ರಮಾಣೀಕರಿಸಿರಬೇಕು.